Sri D. PARAMESWARAPPA.—With regard to sl. No (7), may I know the places where they are located?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹೊನ್ನಾಳಿ ತಾಲ್ಲೂಕಿನಲ್ಲಿ ಕುಂಗನೂರು-1, ಗೋರ್ಯೆ ಕೋಯಿ-1, ಸುಂಕದ ಕಟ್ಟೆ-1, ಹೊನ್ನಾಳಿ ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿ-1-ಹೀಗೆ ನಿರ್ಮಿತವಾಗಿವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ನನ್ನ ಸ್ವಂತ ಊರಾಗಿರುವ ಸಿರಿಯೂರಿನಲ್ಲಿ ಹಿಂದೆ ಮಳಿಗೆಗಳನ್ನು ಕೊಡುವುದಕ್ಕೋಸ್ಕರ ಪಂಚಾಯಿತಿಯಿಂದ ರಾಯಲ್ಟಿ ತೆಗೆದುಕೊಂಡಿದ್ದರೂ ಇದುವರೆಗೂ ಅಲ್ಲಿ ಮಳಿಗೆಗಳನ್ನು ನಿರ್ಮಿಸದೆ ಇರಲು ಕಾರಣವೇನು?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸಿರಿಯೂರ್‌ನಲ್ಲಿ ಅವಶ್ಯಕವಿದ್ದರೆ ಪುನಃ ಮಾನ್ಯ ಸದಸ್ಯರು ತಿಳಿಸಲಿ. ಅದನ್ನು ಕೊಡುವ ಯೋಚನೆ ಮಾಡಲಾಗುತ್ತದೆ.

Sri D. PARAMESWARAPPA.—May I know whether any buildings have been constructed in these places, so far as Honnali Taluk is concerned, for purposes of godowns?

Sri RAMAKRISHNA HEGDE.—They are in various stages of progress.

Sri G. VENKATAI GOWDA.—May I know the agencies which have been entrusted with the construction of the godowns?

Sri RAMAKRISHNA HEGDE.—It will be the society which has been granted the loan and subsidy.

ಶ್ರೀ ಕೆ. ಲಕ್ಕಪ್ಪ.—ಮಳಿಗೆ ಕಟ್ಟುವ ವಿಷಯದಲ್ಲಿ ಸಿಬ್ಬಂದಿ ಅಭಾವ ಎಂದು ತಿಳಿಸಿದ್ದೀರಿ. ಅಭಾವ ಏಕೆ ಬಂತು, ಸ್ವಾಮಿ?

Mr. SPEAKER.—I disallow that question.

Licence for starting one more sugar factory at Gangavathi.

*Q.—174. **Smt. B A S A V A R A J E SWARI** (Manvi).—

Will the Government be pleased to state:—

(*a*) whether it is a fact that they have given a licence to one private person for starting one more sugar factory at Gangavati;

(*b*) if so, when it was given and to whom;

(*c*) the main reasons for not starting it so far;

(*d*) the action taken by them in the matter?

*A.—**Sri K. MALLAPPA** (Minister for Industries and Commerce).—

(*a*) and (*b*) The Government of India have issued a draft licence on 23rd June 1960 to M/s. Kilachand Devchand and Co., for starting a sugar factory at Gangavati.

(*c*) He failed to evince any interest.

(*d*) No action could be taken by Government when the party evinced no interest in the matter.

ಶ್ರೀಮತಿ ಬಸವರಾಜೇಶ್ವರಿ.—ಮಂಜೂರಾಗಿ ಎರಡು ವರ್ಷ ಆದರೂ ಕೂಡ ಸಕ್ಕರೆ ಕಾರ್ಖಾನೆ ಮಾಡದಿರುವುದರ ಕಾರಣವೇನು?

†ಶ್ರೀ ಕೆ. ಮಲ್ಲಪ್ಪ.—ಪಾರ್ಟಿ ಮುಂದೆ ಬರಲಿಲ್ಲ, ಪ್ರಾರಂಭ ಮಾಡಲಿಲ್ಲ.

ಶ್ರೀಮತಿ ಬಸವರಾಜೇಶ್ವರಿ.—ಅವರು ಹಾಕಿದ ಕಂಡಿಷ್ಟಿಗೂ, ನಿಮ್ಮ ಕಂಡಿಷ್ಟಿಗೂ ಸರಿಹೋಗದೇ ಒಪ್ಪಿಗೆ ಆಗಲಿಲ್ಲವೇ? ಅಥವಾ ಇನ್ನೇನಾದರೂ ಕಾರಣವಿದೆಯೇ?

ಶ್ರೀ ಕೆ. ಮಲ್ಲಪ್ಪ.—ಅವರಿಗೆ ಲೈಸೆನ್ಸು ಕೊಟ್ಟಿತ್ತು. ಯಾವ ಕಾರಣದಿಂದ ಪ್ರಾರಂಭ ಮಾಡಲಿಲ್ಲ ಎಂಬುದು ನಮಗೆ ಗೊತ್ತಿಲ್ಲ. ಅಂತೂ ಅವರು ಪ್ರಾರಂಭ ಮಾಡಿಲ್ಲ.

ಶ್ರೀಮತಿ ಬಸವರಾಜೇಶ್ವರಿ.—ತುಂಗಭದ್ರಾ ಜಲಾಶಯದ ಕೆಳಗೆ ಕಬ್ಬು ಬೆಳೆಯತಕ್ಕ ಜಮೀನು ಒಟ್ಟು ಎಷ್ಟು ಎಕರೆ ಪ್ರದೇಶ ಇದೆ?

ಶ್ರೀ ಕೆ. ಮಲ್ಲಪ್ಪ.—ಅದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಹಾಕಬೇಕು.

ಶ್ರೀಮತಿ ಬಸವರಾಜೇಶ್ವರಿ.—ನಾರಾರ್ ಜಂಗ್ ಷುಗರ್ ಫ್ಯಾಕ್ಟರಿ ಮ್ಯಾಕ್ಸಿಮಂ ಕ್ರಷಿಂಗ್ ಕೆಪ್ಯಾಸಿಟಿ ಎಷ್ಟು?

Sri B. D. JATTI.—The capacity is 800 tons.

ಒಬ್ಬ ಸದಸ್ಯರು.—ಗಂಗಾವತಿ ಷುಗರ್ ಫ್ಯಾಕ್ಟರಿಗೆ ದುಡ್ಡು ಕೊಡಿಸಿಕೊಟ್ಟಿದ್ದು ಏನಾಯಿತು?

Sri B. D. JATTI.—Sir, it was not a co-operative sugar factory. It was a joint stock company. The party ought to have started it. But he could not start it due to his own difficulties.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಗಂಗಾವತಿ ಫ್ಯಾಕ್ಟರಿಗೆ ಲೈಸೆನ್ಸ್ ಕೊಟ್ಟಿರುವುದು ಹಾಗೆಯೇ ಇದೆಯೇ ಅಥವಾ withdraw ಮಾಡಿದ್ದಾರೆಯೇ?

Sri B. D. JATTI.—Because he did not implementits, it was cancelled.

Sri ANNA RAO GANAMUKHI.—May I know whether the people who had formed a co-operative society had collected the share amount and had approached for a licence, and instead of recommending a licence for them, did not the Government encourage a private party and keep away the joint venture?

Sri B. D. JATTI.—Sometime back a co-operative society was formed; but the persons ceased to take interest and the money collected was returned.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಫ್ಯಾಕ್ಟರಿ ಪ್ರಾರಂಭ ಮಾಡಲು ಕೊಟ್ಟ ಲೈಸೆನ್ಸು ಕ್ಯಾನ್ಸಲ್ ಆಗಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಕ್ಯಾನ್ಸರ್ ಆಗಿದೆ.

ಶ್ರೀ ಆರ್. ಎಸ್. ಲಕ್ಷ್ಮೀಪತಿ.—ಗಂಗಾವತಿಯಲ್ಲಿ ಮಾಡಬೇಕೆಂದಿದ್ದ ಷುಗರ್ ಫ್ಯಾಕ್ಟರಿಯನ್ನು ಗೋರಿಬಿದನೂರಿಗೆ ಷಿಫ್ಟ್ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟದ್ದು ನಿಜವೇ ?

Sri B. D. JATTI.—Government did not give any assurance. Some parties were interested in having a sugar factory at Goribidnur and they were trying to get a licence.

Sri C. J. MUCKANNAPPA.—The answer to (*d*) is that 'no action could be taken by Government when the party evinced no interest in the matter.' In the month of March when we met, the then Chief Minister said that the people of that area never wanted that sugar factory and therefore the licence was cancelled. Is it that the party did not evince interest or is it the people who did not want a sugar factory ?

Sri B. D. JATTI.—It can never happen that the people do not want a sugar factory. But the point is that the person who got the licence was not interested.

ಶ್ರೀಮತಿ ಬಸವರಾಜೇಶ್ವರಿ. ಈಗ ಕಬ್ಬು ಬೆಳೆಯತಕ್ಕವರಿಗೆ ಬಹಳ ತ್ರಾಸು ಆಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದು ಮುಂದಾದರೂ ಈ ಸಕ್ಕರೆ ಕಾರ್ಖಾನೆ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಪ್ರಯತ್ನ ಮಾಡುತ್ತೇವೆ. ಕೇಂದ್ರ ಸರ್ಕಾರದ ಥೋರಣ್ ಇರುವುದು ತಾತ್ಕಾಲಿಕವಾಗಿ ಹೆಚ್ಚು ಸಕ್ಕರೆಯನ್ನು ತಯಾರಿಸಲಿಕ್ಕೆ ಲೈಸೆನ್ಸ್ ಕೊಡುವುದಿಲ್ಲ ಎಂದು ಆಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಲೈಸೆನ್ಸ್ ಕೊಡಬೇಡಿ ಎಂದು ಥೋರಣ್ ಇದೆ ಎಂದು ಈಗ ನೀವು ಹೇಳುತ್ತೀರಿ. ಆಗಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಕಂಠಿ ಅವರು ಜನ ಬೇಡ ಎಂದು ಹೇಳಿದರು ಎಂದು ಈ ಸಭೆಯಲ್ಲಿ ಹೇಳಿದ್ದಾರೆ. ಪೇಪರ್‌ನಲ್ಲಿ ರಿಪೋರ್ಟ್ ಆಗಿದೆ.

ಶ್ರೀ ಎಸ್. ಆರ್. ಕಂಠಿ.—ಎಂದೂ ಆ ರೀತಿ ನಾನು ಹೇಳಿಲ್ಲ, ನತ್ಯಂ ವಧಾ ಮಾಡುತ್ತಾ ಇದ್ದೀರಿ ಸ್ವಾಮಿ, ನೀವು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನತ್ಯ ಹರಿಶ್ಚಂದ್ರರು ಸ್ವಾಮಿ, ನನಗೆ ಗೊತ್ತಿದೆ; ಅನತ್ಯ ನುಡಿಯುವುದರಲ್ಲಿ ನಂಬರ್ one ಸ್ವಾಮಿ ಅವರು.

Mr. SPEAKER.—If you use the question time in that way I will not allow it. You put a question. Don't make comments. Read what has been printed and then begin to put a question.

ಶ್ರೀ ಕೆ. ಮಲ್ಲಪ್ಪ.—ಕಿರಾಚೆಂದ್ ದೇವ್‌ಚೆಂದ್ ಅವರಿಗೆ ಲೈಸೆನ್ಸ್ ಕೊಟ್ಟಿತ್ತು, ಅವರು ನಡೆಸಲಿಲ್ಲ. ಅಲ್ಲಗೇ ಕೈಬಿಟ್ಟಿದೆ.

ಶ್ರೀ ಬಿ. ಹುಚ್ಚೇಗೌಡ.—ನಿನ್ನೆ ದಿವನ ಮದರಾಸ್ ಫೈನಾನ್ಸ್ ಮಿನಿಸ್ಟರು ಈ ವರ್ಷ ಮೂರು ಕೋ-ಆಪರೇಟೀವ್ ಷುಗರ್ ಫ್ಯಾಕ್ಟರಿಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದಾರೆ. ಮದರಾಸಿನಲ್ಲಾ ಸಾಧ್ಯವಾಗುವುದಾದರೆ ಇಲ್ಲಾ ಏಕೆ ಸಾಧ್ಯವಿಲ್ಲ ಸ್ವಾಮಿ?

ಶ್ರೀ ಕೆ. ಮಲ್ಲಪ್ಪ.—ಪ್ರಾರಂಭ ಮಾಡುವುದಕ್ಕೂ, ಲೈಸೆನ್ಸ್ ಸಿಕ್ಕುವುದಕ್ಕೂ ಅಂತರ ಇದೆ, ಸ್ವಾಮಿ.

Giving effect to the Revised Scales of Pay of 1956 and 1961.

*Q.—230. Sri C. M. REVANASIDDAIAH (Siruguppa).—

Will the Government be pleased to state :—

(*a*) whether it is a fact that the revised scales of pay of 1956 and 1961 have not been given effect to in many Departments ;

(*b*) if so, why ?

*A.—Sri B D. JATTI (Minister for Finance).—

(*a*) and (*b*) Government are not aware of the fact nor have any complaints to that effect been received so far. Government have, however, written to Heads of Departments asking them to forward a monthly progress report of unsettled cases, so that any avoidable delay in any case may be checked.

Sri C. M. REVANASIDDAIAH.—Has it not come to the notice of the Government that certain employees in P.W.D., Co-operation and Police Departments, have not received the revised scales of pay ?

†Sri B. D. JATTI.—At the taluka level, there are some cases. But they will be looked into very early and all the cases will be decided.

Sri C. M. REVANASIDDAIAH.—Has the Government called for a report from the District Officers concerned regarding the number of officials who are not enjoying the benefits of the revised scales of pay ?

Sri B. D. JATTI.—Yes, Sir.

Sri G. VENKATAI GOWDA.—Is it not a fact that in many departments, the equation of posts has not been done ?